
ದೂರವಿರಬೇಕಾದ ಪರಿಸ್ಥಿತಿಯನ್ನು ಅವರಿಗೆ ನಿವೇದಿಸಿಕೊಂಡು ಮನದಟ್ಟು ಮಾಡಿಸಿದರು. ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದು ಮಧ್ಯದಲ್ಲಿ ಬಿಟ್ಟುಹೋದರೆ ಸಂಸ್ಥೆಗೂ ಅಧ್ಯಕ್ಷರಿಗೂ ಆರಿಸಿದ ಹಿರಿಯರಿಗೂ ಶ್ರೇಯಸ್ಕರವಲ್ಲ ಎಂದು ಹಿರಿಯರು ತೀರ್ಮಾನಕ್ಕೆ ಬಂದರು. ಆಗ ಆ ಹಿರಿಯರೆಲ್ಲರೂ ಯೋಚಿಸಿ ತೆಗೆದುಕೊಂಡ ತೀರ್ಮಾನವು ನಭೂತೋ ನಭವಿಷ್ಯತಿ! ಈಗಿನ ಪರಿಸ್ಥಿತಿಯಲ್ಲಿ ಅದನ್ನು ಊಹಿಸಲೂ ಸಾಧ್ಯವಿಲ್ಲ. ಆಗ ನ್ಯಾಯವಾದಿಗಳಾಗಿದ್ದ




ನಿಟ್ಟೂರು ಶ್ರೀನಿವಾಸರಾಯರನ್ನು ಹಂಗಾಮಿ ಮೇಲ್ವಿಚಾರಕರಾಗಿ ಅಧ್ಯಕ್ಷರ ಕಾರ್ಯವನ್ನು ನಿರ್ವಹಿಸಲು ನಿರ್ದೇಶಿಸಿದರು. ಇದು ಶ್ರೀರಾಮನು ಇಲ್ಲದಿದ್ದಾಗ ಅಯೋಧ್ಯೆಯ ಆಡಳಿತವನ್ನು ಭರತನು ನಿರ್ವಹಿಸಿದಂತೆ ಇತ್ತು. ಕನ್ನಡ ಸಾಹಿತ್ಯ ಪರಿಷತ್ತಿನ ನಿಬಂಧನೆಗಳಲ್ಲಿ ಅಂಥದ್ದು ಸಾಧ್ಯವಿಲ್ಲದಿದ್ದರೂ ಸಂಸ್ಥೆಯ ಹಿತದೃಷ್ಟಿಯಿಂದ ಈ ಅನಧಿಕೃತ ಏರ್ಪಾಟನ್ನು ಮಾಡಿದ್ದರು. ಇದನ್ನು ಯಾರೂ ವಿರೋಧಿಸಲಿಲ್ಲ. ಇದು ಪರಿಷತ್ತಿನ ದಿನನಿತ್ಯದ ಕಾರ್ಯಗಳಿಗೆ ಅಡೆತಡೆಯಾಗದಂಥ ಏರ್ಪಾಡು. ಆಗ ಸಂಬಂಧಪಟ್ಟವರೆಲ್ಲರೂ ಹೀಗೊಂದು ವ್ಯವಸ್ಥೆಯಾಗಿದೆ ಎನ್ನುವುದನ್ನು ಯೋಚಿಸದ ರೀತಿಯಲ್ಲಿ ಆಡಳಿತದ ಕಾರ್ಯವನ್ನು ನಿರ್ವಹಿಸಿದ್ದರು. ಇಂಥ ಅಸಾಧ್ಯಕಾರ್ಯವನ್ನು ಸಾಧ್ಯವಾಗಿಸಿದ ಅಂದಿನ ಸಾಮರಸ್ಯದ ಆಡಳಿತವು ಪರಿಷತ್ತಿನ ಚರಿತ್ರೆಯಲ್ಲಿ ಚಿನ್ನದ ಅಕ್ಷರಗಳಿಂದ ಬರೆದಿಡಬೇಕಾದ ಅಂಶವಾಗಿದೆ.

ಅಧ್ಯಕ್ಷರಾದ ಮೂರ್ತಿರಾಯರು ಹಾಗೂ ಹಂಗಾಮಿ ಅಧ್ಯಕ್ಷರಂತೆ ಮೇಲ್ವಿಚಾರಕರಾಗಿದ್ದ ನಿಟ್ಟೂರು ಶ್ರೀನಿವಾಸರಾಯರು, ಇಬ್ಬರ ನಿರ್ದೇಶನದಂತೆ ಕಾರ್ಯದರ್ಶಿಯಾಗಿದ್ದ ಜಿ. ವೆಂಕಟಸುಬ್ಬಯ್ಯ ಅವರು ಕಾರ್ಯನಿರ್ವಹಿಸಬೇಕಾಗಿತ್ತು. ಇದನ್ನು ಆಗಾಗ ಮೂರ್ತಿರಾಯರು ಪತ್ರದ ಮೂಲಕ ಸೂಚಿಸುತ್ತಿದ್ದರು. (ನೋಡಿ: ಛಾಯಾಚಿತ್ರ). ಆ ಸಂದರ್ಭವನ್ನು ನನಗೆ ಪ್ರೊ. ಜಿ.ವಿ. ಅವರು 'ಅವರಿಬ್ಬರಿಗೂ ಭಿನ್ನಾಭಿಪ್ರಾಯವು ಎಂದಿಗೂ ಬಾರದಂತೆ, ಸಾಹಿತ್ಯ ಪರಿಷತ್ತಿನ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು, ನಾನು ಬಹಳ ಚಾಕಚಕ್ಯತೆಯಿಂದ ಕಾರ್ಯನಿರ್ವಹಿಸಬೇಕಾಗಿತ್ತು. ಆ ಸಂದರ್ಭದಲ್ಲಿ ಅನೇಕ ಸೂಕ್ಷ್ಮ ಸಂಗತಿಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದು ನನ್ನ ಅನುಭವವನ್ನು, ಸ್ಥೈರ್ಯವನ್ನು ಹೆಚ್ಚಿಸಿತ್ತು. ಪರಿಷತ್ತಿನಲ್ಲಿ ನಮ್ಮ ಅಧಿಕಾರದ ಅವಧಿಯ ಅನಂತರ ಅವರಿಬ್ಬರಿಗೂ ನನ್ನ ಮೇಲಿನ ಪ್ರೀತಿ ವಿಶ್ವಾಸಗಳು ಹೆಚ್ಚಾದವು' ಎಂದು ತಿಳಿಸಿದ್ದರು.

ಇವರು ಮೂವರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಆಡಳಿತವನ್ನು ನಡೆಸುತ್ತಿದ್ದ ಕಾಲವು ಕನ್ನಡ ಭಾಷೆಯನ್ನು ಮಾತನಾಡುವ ಕನ್ನಡಿಗರ ದೃಷ್ಟಿಯಿಂದ ಒಂದು ಪರ್ವಕಾಲವಾಗಿತ್ತು. ಅದು ಸ್ವತಂತ್ರ ಭಾರತವು ಭಾಷಾವಾರು ಪ್ರಾಂತ್ಯಗಳ ರಚನೆಯನ್ನು ಕೈಗೆತ್ತಿಕೊಂಡಿದ್ದ ಕಾಲ. ಮೈಸೂರು ರಾಜ್ಯವು ಸ್ವತಂತ್ರ ಭಾರತದ ಒಕ್ಕೂಟ ವ್ಯವಸ್ಥೆಗೆ ಸೇರಿಕೊಂಡಿತ್ತು. ದೇಶವನ್ನು ಭಾಷಾವಾರು ರಾಜ್ಯಗಳಾಗಿ ಪುನರ್ವಿಂಗಡಿಸಬೇಕು ಎಂದು ಕೇಂದ್ರ ಸರ್ಕಾರವು ಫಜಲ್ ಅಲಿ ಅವರ ನೇತೃತ್ವದಲ್ಲಿ ಆಯೋಗವನ್ನು ರಚಿಸಿತ್ತು. ಆ ಆಯೋಗದ ಮುಂದೆ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿದ್ದ ಪ್ರೊ. ಜಿ.ವಿ. ಅವರು ಪರಿಷತ್ತಿನ ಹಾಗೂ ತಮ್ಮ ನಿಲುವನ್ನು ತಿಳಿಸಿ ಮನವಿ ಪತ್ರವನ್ನು ನೀಡಿದ್ದರು.